# ದಕ್ಷಿಣ ಪೂರ್ವ ಏಷಿಯಾ – ಸಂತೋಷ ತುಂಬಿದ ಕೌಟುಂಬಿಕ ರಜಾದಿನಗಳು

ರಜಾದಿನಗಳೆಂದರೆ ಹೇರಳವಾದ ಮಜಾ.... ರಜಾಕಾಲವೆಂದರೆ ಇಡಿಯಾದ ಮೋಜು... ರಜೆಗಳೆಂದರೆ ಸಂಪೂರ್ಣ ವಿಶ್ರಾಂತಿ ಹಾಗೂ ಮನರಂಜನೆ. ಅಷ್ಟೇ ಅಲ್ಲ! ರಜೆಗಳೆಂದರೆ ಮೋಜು–ಮಸ್ತಿಗಳಿಂದ ಕೂಡಿದ ಶಾಪಿಂಗ್ ಕೂಡಾ ಹೌದು! 'ರಜಾದಿನ'ಎಂಬ ಶಬ್ದದ ಪರಿಕಲ್ಪನೆಯು ಪ್ರತಿಯೊಂದೂ ವಯಸ್ಸಿನ ಗುಂಪಿಗೆ ಅನುಗುಣವಾಗಿ ಬದಲಾಗುತ್ತಲೇ ಇರುತ್ತದೆ. ಆದರೆ, ರಜೆಯ ಈ ಎಲ್ಲ ಪರಿಕಲ್ಪನೆಗಳನ್ನೂ ಸಂಯೋಜಿಸಿಕೊಂಡಿರುವ ಒಂದೇ ಒಂದು ತಾಣವೆಂದರೆ ಅದು ದಕ್ಷಿಣ ಪೂರ್ವ ಏಷಿಯಾ. ಸಿಂಗಾಪುರ, ಮಲೇಶಿಯಾ ಹಾಗೂ ಥಾಯ್ಲೆಂಡ್‌ಗಳನ್ನು ಒಳಗೊಂಡ ಪ್ರವಾಸಗಳು ನಿಜವಾಗಿಯೂ ವಾಸ್ತವವಾದ ಸಂತೋಷ ತುಂಬಿದ ಕೌಟುಂಬಿಕ ಪ್ರವಾಸದ ಗ್ಯಾರಂಟೀ ಕೊಡುತ್ತವೆ.

ಥಾಯ್ಲೆಂಡ್ ಎಂಬುದರ ನಿಜವಾದ ಅರ್ಥವೇ 'ಮುಕ್ತತೆಯ ನಾಡು'ಎಂಬುದಾಗಿದೆ. ಆದ್ದರಿಂದ, ಅಲ್ಲಿ ಒಂದು ನಿರಂತರವಾದ ಸಂಪೂರ್ಣ ಸಂತೋಷದ ತೊರೆಯೊಂದು ಯಾವಾಗಲೂ ತಡೆಯಿಲ್ಲದೇ ಹರಿಯುತ್ತಿರುತ್ತದೆ. ಪಟ್ಟಾಯಾದ ಅಲ್ಕಾಝಾರ್ ಶೋ, ನಾಂಗ್ ನೂಚ್ ಹಳ್ಳಿಯ ಎಲಿಫಂಟ್ ಶೋ, ಪೊಟ್ರೀ ಗಾರ್ಡನ್, ಥಾಯ್ ಸಾಂಸ್ಕೃತಿಕ ಶೋಗಳು ಹಾಗೂ ಪ್ಯಾರಾಸೇಲಿಂಗ್ ಕೊಡುವ ಥ್ರಿಲ್ಲಿಂಗ್ ಅನುಭವಗಳು ನಮ್ಮ ಥೈಲ್ಯಾಂಡ್ ಪ್ರವಾಸದ ಮಜವನ್ನು ಹೆಚ್ಚಿಸುತ್ತವೆ. ಒಮ್ಮೆ ನಾವು ಮಲೇಶಿಯಾವನ್ನು ತಲುಪಿ ಅಲ್ಲಿನ ಗೆಂಟಿಂಗ್ ಹೈಲ್ಯಾಂಡ್ಸ್‌ನ ಮೇಲೆ ಕಾಲಿಟ್ಟೆವೆಂದರೆ ಮನೋರಂಜನೆಯು ಉತ್ತುಂಗವನ್ನು ತಲುಪುತ್ತದೆ. ಎತ್ತರಕ್ಕೇರುತ್ತ ಪರ್ವತದ ತುದಿಯಲ್ಲಿರುವ ಈ ಜಾಗವನ್ನು ಕೇಬಲ್ ಕಾರಿನಲ್ಲಿ ಚಲಿಸುವದೇ ಒಂದು ರೀತಿಯ ರೋಮಾಂಚಕ ಅನುಭವ. ಗೆಂಟಿಂಗ್ ಹೈಲ್ಯಾಂಡಿನ ಸ್ಪೇಸ್ ಶಾಟ್, ರೋಲರ್ ಕೋಸ್ಟರ್, ಜುರಾಸಿಕ್ ಪಾರ್ಕ್, ಸ್ಪೇಸ್ ಮೌಂಟೇನ್ ಮುಂತಾದವುಗಳಲ್ಲಿ ವಿಹರಿಸುವುದು ಎಲ್ಲರನ್ನೂ ತಮ್ಮ ವಯಸ್ಸು ಮರೆಯುವಂತೆ ಮಾಡುತ್ತದೆ. ಮಲೇಷಿಯಾದ ರಾಜಧಾನಿ ಕೌಲಾಲಂಪುರದ ಮೂಲಕ ಪ್ರಯಾಣಿಸುವಾಗ ಜಗತ್ಪ್ರಸಿದ್ಧ ಪೆಟ್ರೋನಸ್ ಅವಳಿ ಗೋಪುರಗಳು ಪ್ರವಾಸಿಗರ ಗಮನವನ್ನು ಸೆಳೆಯುತ್ತವೆ. ಸಂತೋಷಕ್ಕಾಗಿ ಎಲ್ಲರಲ್ಲೂ ಇರುವ ದಾಹವನ್ನು ಈವರೆಗಿನ ಅಪರಿಮಿತ ಆನಂದದ ಕ್ಷಣಗಳು ತಣಿಸುತ್ತಿರುವಾಗಲೇ, 'ಸನ್ ವೇ ಲಗೋನ್'ಥೀಮ್ ಪಾರ್ಕ್'ನ್ನು ಪ್ರವೇಶಿಸುತ್ತಿದ್ದಂತೆ ಖುಷಿಯನ್ನು ಹೆಚ್ಚಿಸುವ ಹೊಸ ಅಲೆಯೊಂದು ಎಲ್ಲರನ್ನೂ ಬಡಿಯುತ್ತದೆ.

ಸಿಂಗಾಪುರದ ಈ ನಡುಗಡ್ಡೆಯು ತನ್ನ ಆಕರ್ಷಣೆಯ ತಾಣಗಳಿಂದ ಯಾವಾಗಲೂ ಮಿನುಗುತ್ತಲೇ ಇರುತ್ತದೆ. ಕಾಡುಪ್ರಾಣಿಗಳನ್ನು ತೀರಾ ಹತ್ತಿರದಿಂದ ನೋಡುವ ಅವಕಾಶ ಕಲ್ಪಿಸುವ 'ನೈಟ್ ಸಫಾರಿ'ಯು ಈ ದೇಶದ ವಿಶೇಷ ಆಕರ್ಷಣೆ. ಸಿಂಗಾಪುರದ ಇನ್ನೊಂದು ಗುಣವಿಶೇಷವೇನೆಂದರೆ, ನೀವು ಇಲ್ಲಿ ಬೇಕಾದ ಎಲ್ಲ ರೀತಿಯ ಸಾರಿಗೆ ಆಯ್ಕೆಗಳನ್ನು ಉಪಯೋಗಿಸಿಕೊಂಡು ಪ್ರಯಾಣಿಸಬಹುದು. ಅಂಡರ್ ಗ್ರೌಂಡ್ ರೇಲ್ವೆ, ಝುಮ್ಮೆನ್ನುವ ಕೇಬಲ್ ಕಾರುಗಳು ಹಾಗೂ ದಶಕಗಳಷ್ಟು ಹಳೆಯದಾದ ಟ್ರಾಮುಗಳು ಹೀಗೆ ಯಾವುದೇ ಪ್ರಕಾರದದಲ್ಲಿಯೂ ಪ್ರಯಾಣಿಸಬಹುದಾಗಿದೆ.






ಕೇಬಲ್ ಕಾರಿನಿಂದ 'ಸೆಂಟೋಸಾ ದ್ವೀಪ'ವನ್ನು ಪ್ರವಾಸಿಯೋರ್ವ ತಲುಪಿದಾಗ ಮಜಾ–ಮಸ್ತಿಯ ಉತ್ತುಂಗವನ್ನು ತಲುಪಿದ ಜಾತ್ರೆಗೆ ಬಂದಂತಹ ಅನುಭವವನ್ನು ಪಡೆಯುತ್ತಾನೆ. ಅದೇರೀತಿ 'ಅಂಡರ್ ವಾಟರ್ ವರ್ಲ್ಡ್' ಪ್ರಯಾಣವು ಸಮುದ್ರ ತಳದ ಪ್ರಶಾಂತತೆ ಹಾಗೂ ಮನೋಹರ ದೃಶ್ಯಗಳ ಸಮ್ಮಿಶ್ರಣದೊಂದಿಗೆ ಆಕರ್ಷಣೀಯ ನೋಟವನ್ನು ನೀಡುತ್ತದೆ. 'ಸೆಂಟೋಸಾ 4ಡಿ ಮ್ಯಾಜಿಕ್ ಶೋ' ವಿಜ್ಞಾನ ಮತ್ತು ತಂತ್ರಜ್ಞಾನಗಳ ಮಹೋನ್ನತೆಯನ್ನು ನಿಮ್ಮ ಮುಂದಿರಿಸಿ ನಿಮ್ಮನ್ನು ಮೂಕರನ್ನಾಗಿಸುತ್ತದೆ. ಸೆಂಟೋಸಾದ ಅತ್ಯುನ್ನತ ಆಕರ್ಷಣೆಯೆಂದರೆ 'ಸಾಂಗ್ಸ್ ಆಫ್ ದ ಸೀ ಶೋ'. ಪಕ್ಷಿಗಳ ಜೀವನದ ಕುರಿತಾಗಿ ನಮ್ಮಲ್ಲಿ ನವೀನ ದೃಷ್ಟಿಯನ್ನು ನೀಡುವ 'ಜುರಾಂಗ್ ಬರ್ಡ್ ಪಾರ್ಕ್'ನ ಪೆಂಗ್ವಿನ್ ಪಕ್ಷಿಗಳ ಪರೇಡ್, ಮಾತನಾಡುವ ಪಕ್ಷಿಗಳ ಶೋವನ್ನು ನೋಡಿದ ನಂತರ, ನಿಸರ್ಗವು ನೀಡಿದ ಕೌಶಲಗಳಿಂದ ನಾವು ಆಶೀರ್ವದಿಸಲ್ಪಟ್ಟಿದ್ದೇವೆ ಎಂಬುದರ ಅರಿವಾಗುತ್ತದೆ.

ಸಿಂಗಾಪುರದಲ್ಲಿರುವ ಪ್ರವಾಸೀ ತಾಣಗಳ ಪಟ್ಟಿ ತುಂಬಾ ಉದ್ದವಾಗಿದೆ. ಅದೇ ಕಾಲಕ್ಕೆ ಅದು ಅಪರಿಮಿತ ಆನಂದಕ್ಕಾಗಿ ಹಾತೊರೆಯುವ ಯುವ ಮನಸ್ಸುಗಳ ದಾಹವನ್ನು ತಣಿಸಲು ಸಮರ್ಥವಾಗಿದೆ. ಬಹುಕಾಲ ನೆನಪಿನಲ್ಲುಳಿಯುವ ಈ ದಕ್ಷಿಣ ಪೂರ್ವ ಏಷಿಯಾ ಪ್ರವಾಸದ ದಿನಗಳಿಗೆ ಇನ್ನೂ ಹೆಚ್ಚಿನದನ್ನು ಸೇರಿಸಿಕೊಳ್ಳಬೇಕೆಂದರೆ ಸ್ಥಳೀಯ ರುಚಿಕರ ಅಡುಗೆಗಳನ್ನು ಯಥೇಚ್ಛವಾಗಿ ಹೊಂದಿರುವ ಬ್ಯಾಂಕ್ವೆಟ್‌ಗಳಿಗೆ ಹೋಗಲೇ ಬೇಕು. ಥೈಲ್ಯಾಂಡಿನ ರಾಜಧಾನಿ ಬ್ಯಾಂಕಾಕಿನಲ್ಲಿರುವ 'ಛಾವೋ ಫಾರ್ಯಾ ರಿವರ್ ಕ್ರೂಸ್'ನಲ್ಲಿ ಪ್ರಯಾಣಿಸುವಾಗ ಪ್ರವಾಸಿಗರು ಮೋಜಿನಿಂದ ಕೂಡಿದ ಕ್ಷಣಗಳನ್ನು ಸವಿಯುತ್ತಾರೆ. ಇಲ್ಲಿರುವ ವಿವಿಧ ವಿಧಗಳ 'ಕಾಂಟಿನೆಂಟಲ್ ಫುಡ್'ಗಳನ್ನು ಕಲಾತ್ಮಕವಾಗಿ ಉಣಬಡಿಸುವ ರೀತಿಯೊಂದೇ ನಿಮ್ಮ ಹಸಿವನ್ನು ತಣಿಸುವಂತಿದ್ದರೆ, ಇನ್ನೊಂದೆಡೆಗೆ ನಿಮ್ಮೊಳಗಿನ ಹಸಿವನ್ನು ಕಿಚ್ಚೆಬ್ಬಿಸುತ್ತದೆ! ಇಲ್ಲಿನ ಸ್ಪೆಷಲ್ ಥಾಯ್ ತಿನಿಸುಗಳಾದ ಟಾಮ್ ಯಾಮ್ ಸೂಪ್, ಪಪಾಯಾ ಸಾಲಡ್, ಜಪಾನಿ ಅಡುಗೆಗೆ ಸಂಬಂಧಿಸಿದ 'ಸುಶಿ', ಹಾಗೂ ಸಸ್ಯಾಹಾರಿಗಳಿಗಾಗಿಯೇ ಸ್ಪೆಷಲ್ಲಾಗಿ ತಯಾರಿಸುವ 'ವೆಜ್ ನೂಡಲ್ ಫ್ಲ್ಯಾಟ್' ಹಾಗೂ ಇನ್ನೂ ಅನೇಕ ಖಾದ್ಯಗಳನ್ನು ಇಲ್ಲಿ ಹೆಸರಿಸಲೇ ಬೇಕು. ನೀವು ಸಮುದ್ರ ತೀರಗಳಲ್ಲಿ ಆಟವಾಡಿ ದಣಿದಿದ್ದೀರಾದರೆ, ತಣ್ಣನೆಯ ಎಳನೀರು ನಿಮ್ಮನ್ನು ತಣಿಸಲು ಅಲ್ಲಿ ಯಾವಾಗಲೂ ಲಭ್ಯವಿರುತ್ತದೆ ಹಾಗೆಯೇ ಸಿಹಿಯಾದ ಹನಿಹನಿಯನ್ನು ಮೆಲ್ಲನೆ ಹೀರುತ್ತಿರುವಾಗ, ದೇವಲೋಕದಿಂದ ಮನುಕುಲಕ್ಕಾಗೆಂದೇ ಕಳಿಸಲಾದ ಉಡುಗರೆಯಿದು ಎಂದು ನಿಮಗೆ ಅನಿಸದೇ ಇರದು!

ಥಾಯ್ಲೆಂಡ್, ಸಿಂಗಾಪುರ ಹಾಗೂ ಮಲೇಶಿಯಾ ಈ ಮೂರು ದೇಶಗಳ ಪ್ರವಾಸವು ಯಾವಾಗಲೂ ನೆನಪಿನಲ್ಲುಳಿಯುವಂತಹದ್ದು ಹಾಗೂ ಆಗಾಗ ಹೇಳಿಕೊಳ್ಳಬಹುದಾದಂತಹದ್ದೂ ಆಗಿದೆ ಎಂದು ಬಾಯಿಬಿಟ್ಟು ಹೇಳಬೇಕಾದ ಪ್ರಮೇಯವಿಲ್ಲ. ಮನರಂಜನೆಯ ಉತ್ತುಂಗದೊಂದಿಗೆ ಹಿಂದೆಂದೂ ಸವಿಯದ ಮೈಮನ ಮರೆಸುವ ಆಹಾರದ ರುಚಿ ಸಮ್ಮಿಳಿತವಾಗಿರುವ ಈ ಮನಮೋಹಕ ಪ್ರವಾಸದ ಅನುಭವವನ್ನು ನಿಮ್ಮದಾಗಿಸಿಕೊಳ್ಳಲು ಥಾಯ್ಲೆಂಡ್, ಸಿಂಗಾಪುರ ಹಾಗೂ ಮಲೇಶಿಯಾ ಪ್ರವಾಸಕ್ಕೆ ನಮ್ಮೊಂದಿಗೆ ಸೇರಿಕೊಳ್ಳಿ.


## ಫ್ಯಾಮಿಲಿ ಹಾಲಿಡೇ – ಸೀಸನ್ 2

ಕೇಸರಿ ಮೆಗಾ ಡಿಸ್ಕೌಂಟ್ ಅನ್ನು ಜಾಗತಿಕ ಪ್ರವಾಸಗಳ ಮೇಲೆ ಕೊಡುಗೆಯಾಗಿ ನೀಡುವುದು

ಹಿಮಾಚಲ (H6) 12975 • ಥೈಲ್ಯಾಂಡ್ (FS) 28990 • ಯೂರೋಪ್ (EØ) 100000



KESARI
World Class Travel Company

| ಕೋಡ್ | ಟೂರ್ ಹೆಸರು | ದಿನಗಳು | ನಿರ್ಗಮನ |
|---|---|---|---|
| QT | ಥೈಲ್ಯಾಂಡ್ | 5 | 10 ಸೆಪ್ಟೆಂ |
| Q8 | ಸಿಂಗಪುರ್ ಮಲೇಷಿಯ | 6 | 23 ಸೆಪ್ಟೆಂ |
| Q3 | ಸಿಂಗಪುರ್ ಥೈಲ್ಯಾಂಡ್ ಮಲೇಷಿಯ | 8 | 29 ಸೆಪ್ಟೆಂ |
| Q2 | ಸಿಂಗಪುರ್ ಥೈಲ್ಯಾಂಡ್ ಮಲೇಷಿಯ | 10 | 28 ಸೆಪ್ಟೆಂ |
| MK | ಶ್ರೀಲಂಕಾ | 6 | 25 ಸೆಪ್ಟೆಂ |
| HF | ಶಿಮ್ಲಾ ಮನಾಲಿ (ವಿಮಾನ ಪ್ರಯಾಣ) | 8 | 2 ಸೆಪ್ಟೆಂ |
| R6 | ರಾಜಸ್ಥಾನ್ ಮೇವಾಡ | 7 | 17 ಸೆಪ್ಟೆಂ |

*T&C apply. Advt.

www.kesari.in • Bengaluru 4128 2222 • SMS KESARI <space> your message to 56677 • Toll free 1800 22 1100